# ನಾಮಪಾಡುವನ್

ಕಥೆ : ರೇವತಿ

ಚಿತ್ರ : ಶಂಕರ್

**1** ಮುನಿಗ್ರಾಮದಲ್ಲಿ ಕೆಳಜಾತಿಯಲ್ಲಿ ಹುಟ್ಟಿದವನೇ ನಾಮಪಾಡುವನ್. ಆದರೆ ಅವನು ಅತ್ಯಂತ ಮಧುರವಾಗಿ ಹಾಡುತ್ತಿದ್ದ. ತಿರುಕ್ಕುರುಂಕುಡಿ ದೇವಾಲಯದ ದೇವರನ್ನು ಅವನು ಅತ್ಯಂತ ಭಕ್ತಿಯಿಂದ ಆರಾಧಿಸುತ್ತಿದ್ದ. ಏಕಾದಶಿ ದಿನದಂದು ಅವನು ಉಪವಾಸವಿದ್ದು, ದೇವಾಲಯಕ್ಕೆ ಹೋಗಿ, ಅಲ್ಲಿ ಹೊರಗಿನಿಂದಲೇ ಭಾವಪೂರ್ಣವಾಗಿ ಹಾಡಿ ದೇವರನ್ನು ಮೆಚ್ಚಿಸುತ್ತಿದ್ದ.







**3** ಒಂದು ದಿನ ಏಕಾದಶಿಯಂದು, ಎಂದಿನಂತೆ ನಾಮಪಾಡುವನ್ ಉಪವಾಸ ಮಾಡಿ, ಹಾಡುತ್ತ ನಲಿಯುತ್ತ ದೇವಾಲಯದ ಕಡೆಗೆ ಹೋಗುತ್ತಿದ್ದ. ಮೈಮೇಲೆ ಅರಿವಿಲ್ಲದ ಅವನು ದಾರಿ ತಪ್ಪಿ ಒಂದು ಕಾಡನ್ನು ಹೊಕ್ಕ. ಅಲ್ಲಿ ಒಂದು ಬ್ರಹ್ಮರಾಕ್ಷಸ ಅವನನ್ನು ಹಿಡಿದುಕೊಂಡ.




4
ಓ ರಾಕ್ಷಸನೆ! ನನ್ನನ್ನು ಬಿಟ್ಟುಬಿಡು. ನಾನು ಕೈಶಿಕ ರಾಗದಲ್ಲಿ ಹಾಡುವುದನ್ನು ಕೇಳಲು ಈಗ ದೇವರು ಕಾಯುತ್ತಿರುತ್ತಾನೆ. ದೇವರು ಕಾಯುವಂತೆ ಮಾಡುವುದು ಒಳ್ಳೆಯದೆ?
ಅದೇನೋ ನಿಜ, ಆದರೆ ಇತ್ತ ನಾನು ಹಸಿದಿರುತ್ತೇನಲ್ಲ? ನೀನು ಒಳ್ಳೆಯವನೇನೋ ನಿಜ. ಆದರೆ ನನಗೆ ಹಸಿವಾದ್ದರಿಂದ ನಿನ್ನನ್ನು ಬಿಟ್ಟುಬಿಡಲಾರೆ.
5
ರಾಕ್ಷಸ, ನನ್ನಂಥ ಕೆಳಜಾತಿಯವನಿಂದ ನಿನ್ನ ಹಸಿವು ನೀಗುವುದಾದರೆ, ನಾನು ಧನ್ಯ. ಆದರೇನು ಮಾಡಲಿ, ಹೇಳು. ನೀನು ನನ್ನನ್ನು ತಿನ್ನುವ ಮೊದಲು ನಾನು ದೇವರನ್ನು ಹಾಡು, ನೃತ್ಯಗಳಿಂದ ಒಲಿಸಬೇಕು. ಅನಂತರ ನಾನು ನಿನ್ನ ಬಳಿಗೆ ಬರುತ್ತೇನೆ.
6
ನನಗೆ ನಿನ್ನ ಮೇಲೆ ನಿಜಕ್ಕೂ ಅನುಕಂಪವಿದೆ. ಅದಲ್ಲದೆ, ನೀನು ದೇವರಿಗೆ ಸೇವೆ ಸಲ್ಲಿಸುತ್ತಿರುವುದಾಗಿ ಹೇಳುತ್ತಿದ್ದೀಯೆ. ನೀನು ಹಿಂದಿರುಗಿ ಬರುವವರೆಗೆ ನನ್ನ ಹಸಿವನ್ನು ತಡೆದುಕೊಂಡಿರುತ್ತೇನೆ. ಬೇಗನೆ ಮರಳಿ ಬಾ
ಧನ್ಯವಾದ. ನಾನು ಮರಳಿ ಬಂದ ಮೇಲೆ ನನ್ನನ್ನು ನೀನು ತಿಂದುಬಿಡು. ನನ್ನ ಮೇಲೆ ನಂಬಿಕೆಯಿಡು.




10 ಆ ಕೂಡಲೇ ರಾಕ್ಷಸನ ದೇಹ ಪರಿವರ್ತನೆ ಹೊಂದಿ, ಅವನು ಬ್ರಾಹ್ಮಣನಾಗಿ ಗೋಚರಿಸಿದ.

11




12 ಅಂದು ರಾತ್ರಿ ಭಗವಂತ ನಾಮಪಾಡುವನ್‌ಗೆ ಕನಸಿನಲ್ಲಿ ಕಾಣಿಸಿಕೊಂಡ.




13




ಆಧ್ಯಾತ್ಮಿಕ ಸಾಧನೆಯ ಸೂಕ್ಷ್ಮವಾದ ರಹಸ್ಯವು ಅಡಗಿರುವುದು ನಂಬಿಕೆಗಳಲ್ಲಲ್ಲ; ಅವುಗಳನ್ನು ಆಚರಿಸುವುದರಲ್ಲಿ. ಒಳ್ಳೆಯವರಾಗಿರುವುದು ಮತ್ತು ಒಳ್ಳೆಯದನ್ನು ಮಾಡುವುದು – ಇದೇ ನಿಜವಾದ ಶ್ರೇಷ್ಠತೆ. 'ದೇವರೇ, ದೇವರೇ' ಎಂದು ಉಚ್ಚರಿಸಿದ ಮಾತ್ರಕ್ಕೆ ಒಬ್ಬ ವ್ಯಕ್ತಿ ಸಂತನಾಗುವುದಿಲ್ಲ. ದಿವ್ಯವಾದ ಬಯಕೆಯನ್ನು ಯಾರು ಪೂರೈಸುವನೋ ಅವನೇ ಸಂತ. — ಸ್ವಾಮಿ ವಿವೇಕಾನಂದ



## ಸುದ್ದಿ ಸಂಚಯ


ವಿವೇಕನಗರ, ಅಗರ್ತಲಾ



ಶಿವನಹಳ್ಳಿ

# ರಾಮಕೃಷ್ಣ ಮಹಾಸಂಘದ ಇತ್ತೀಚಿನ ಚಟುವಟಿಕೆಗಳು

ರಾಮಕೃಷ್ಣ ಮಹಾಸಂಘದ ಎಲ್ಲ ಕೇಂದ್ರಗಳಲ್ಲಿ ಡಿಸೆಂಬರ್ ೨೬ರಂದು **ಶ್ರೀಮಾತೆ ಶಾರದಾದೇವಿಯವರ ಜಯಂತಿಯನ್ನು** ಆಚರಿಸಲಾಯಿತು. **ಶಿವನಹಳ್ಳಿ** ಕೇಂದ್ರದಲ್ಲಿ ಸ್ವಾಮಿ ಪ್ರೇಮಾನಂದರ ಜಯಂತಿಯ ದಿನವಾದ ಡಿಸೆಂಬರ್ ೧೨ರಂದು ಹೆಣ್ಣುಮಕ್ಕಳ ಶಾಲೆಯ ಹೊಸ ಕಟ್ಟಡವನ್ನು ಸ್ವಾಮಿ ಗೌತಮಾನಂದಜಿಯವರು ಉದ್ಘಾಟಿಸಿದರು. ತ್ರಿಪುರಾದ ಅಗರ್ತಲಾದಲ್ಲಿರುವ **ವಿವೇಕನಗರ** ಕೇಂದ್ರದ ದೇವಾಲಯದಲ್ಲಿ ಡಿಸೆಂಬರ್ ೧೨ರಂದು ಸ್ವಾಮಿ ಸುಹಿತಾನಂದಜಿಯವರು ದಿವ್ಯತ್ರಯರ ಹೊಸ ಭಾವಚಿತ್ರಗಳನ್ನು ಸ್ಥಾಪಿಸಿದರು. **ಗುವಾಹಟಿ** ಕೇಂದ್ರದ ಛತ್ರಿಬಾರಿ ಕ್ಯಾಂಪಸ್‌ನಲ್ಲಿ ಡಿಸೆಂಬರ್ ೧೩ರಂದು ಆಸ್ಪತ್ರೆಯ ಮೊದಲನೇ ಮಹಡಿಯ ಕಟ್ಟಡವನ್ನು ಉದ್ಘಾಟಿಸಲಾಯಿತು. **ಸರೀಷ** ಕೇಂದ್ರವು ಡಿಸೆಂಬರ್ ೨೫ರಿಂದ ವಿವಿಧ ಕಾರ್ಯಕ್ರಮಗಳೊಂದಿಗೆ ತನ್ನ ಶತಮಾನೋತ್ಸವವನ್ನು ಆಚರಿಸಿತು. ಡಿಸೆಂಬರ್ ೩೦ರಂದು ಪರಮಪೂಜ್ಯ ಅಧ್ಯಕ್ಷ ಮಹಾರಾಜರು **ಸ್ವಾಮಿಜಿಯವರ ಪೂರ್ವಿಕರ ಮನೆಯ** ಸಭಾಂಗಣ ಸಂಕೀರ್ಣವನ್ನು ವರ್ಚುಅಲ್ ಆಗಿ ಉದ್ಘಾಟಿಸಿದರು; ಈ ಸಂದರ್ಭದಲ್ಲಿ ಅನೇಕ ಕಾರ್ಯಕ್ರಮಗಳೂ ನಡೆದವು. **ನಾರಾಯಣಪುರ** ಕೇಂದ್ರದ ಶಾಲೆಯ ಮಕ್ಕಳು ಭಾರತ ರಾಷ್ಟ್ರೀಯ ಕ್ರೀಡಾ ಸಮಿತಿಯು (SGFI) ನಡೆಸಿದ ವಿವಿಧ ಕ್ರೀಡಾಸ್ಪರ್ಧೆಗಳಲ್ಲಿ ಹಲವು ಪದಕಗಳನ್ನು ಪಡೆದಿದ್ದಾರೆ. ಬೇಲೂರಿನ **ಶಾರದಾಪೀಠ**ದ ವಿದ್ಯಾಮಂದಿರ ಕಾಲೇಜು NAAC ನೀಡುವ A++ ಅತ್ಯುನ್ನತ ದರ್ಜೆಯನ್ನು ಮುಂದಿನ ೫ ವರ್ಷಗಳಿಗೆ ಪಡೆದಿದೆ.

# ಮಂಗಳೂರು ರಾಮಕೃಷ್ಣ ಮಠಕ್ಕೆ 'ಅಮೃತ ಮಹೋತ್ಸವ ರಾಜ್ಯಪ್ರಶಸ್ತಿ'



ಕರ್ನಾಟಕ ಸರ್ಕಾರವು ಪ್ರತಿವರ್ಷವೂ ರಾಜ್ಯೋತ್ಸವ ಸಂದರ್ಭದಲ್ಲಿ ವಿವಿಧ ವ್ಯಕ್ತಿಗಳಿಗೆ ಹಾಗೂ ಸಂಸ್ಥೆಗಳಿಗೆ 'ರಾಜ್ಯೋತ್ಸವ ಪ್ರಶಸ್ತಿ'ಯನ್ನು ನೀಡಿ ಗೌರವಿಸುತ್ತದೆ. ಈ ಬಾರಿ ಭಾರತದ ಸ್ವಾತಂತ್ರ್ಯೋತ್ಸವದ ೭೫ನೇ ವರ್ಷಾಚರಣೆಯೂ ಆಗಿರುವುದು ವಿಶೇಷ. ಈ ಬಾರಿ **'ಅಮೃತ ಮಹೋತ್ಸವ ರಾಜ್ಯಪ್ರಶಸ್ತಿ'**ಯನ್ನು ೧೦ ಸಂಸ್ಥೆಗಳಿಗೆ ನೀಡಿದ್ದು, ಮಂಗಳೂರು ರಾಮಕೃಷ್ಣ ಮಠವು ಇದರಲ್ಲಿ ಸೇರಿರುವುದು ಅತ್ಯಂತ ಸಂತಸದ ಸಂಗತಿಯಾಗಿದೆ. ಮಠವು ೨೦೧೫ರಿಂದ ೨೦೧೯ರ ವರೆಗೆ 'ಸ್ವಚ್ಛ ಭಾರತ ಅಭಿಯಾನ'ದಲ್ಲಿ ಸಕ್ರಿಯವಾಗಿ ದುಡಿಯುತ್ತ ಬಂದಿದೆ.

೨೦೨೧ರ ನವೆಂಬರ್ ೧ ರಂದು ನಡೆದ ವಿಶೇಷ ಕಾರ್ಯಕ್ರಮದಲ್ಲಿ ೬೬ ವ್ಯಕ್ತಿಗಳಿಗೆ ಹಾಗೂ ೧೦ ಸಂಸ್ಥೆಗಳಿಗೆ ಪ್ರಶಸ್ತಿ ಪ್ರದಾನ ಮಾಡಲಾಗಿದ್ದು, ಸನ್ಮಾನ್ಯ ಮುಖ್ಯಮಂತ್ರಿಯವರ ಹಾಗೂ ಇತರ ಮಂತ್ರಿಗಳ ಉಪಸ್ಥಿತಿಯಲ್ಲಿ ಮಂಗಳೂರು ರಾಮಕೃಷ್ಣ ಮಠದ ಪರವಾಗಿ ಸ್ವಾಮಿ ಏಕಗಮ್ಯಾನಂಜಿಯವರು ಪ್ರಶಸ್ತಿಯನ್ನು ಸ್ವೀಕರಿಸಿದರು. ಮಠದ ಭಕ್ತರು, ಸ್ವಯಂಸೇವಕರು ಹಾಗೂ ಹಿತೈಷಿಗಳು ಇದಕ್ಕೆ ಪ್ರತಿಸ್ಪಂದಿಸಿ, ತಮ್ಮ ಸಂತಸವನ್ನು ವ್ಯಕ್ತಪಡಿಸಿ ಅಭಿನಂದನೆಗಳನ್ನು ಸಲ್ಲಿಸಿದ್ದಾರೆ. ಕಳೆದ ೫ ವರ್ಷಗಳಿಂದ ನಡೆಸಿಕೊಂಡು ಬರುತ್ತಿರುವ **'ಸ್ವಚ್ಛ ಭಾರತ ಅಭಿಯಾನ'** ಹಾಗೂ ಇತರ ಸೇವಾಕಾರ್ಯಗಳಲ್ಲಿ ನೆರವಾದ ಎಲ್ಲ ವ್ಯಕ್ತಿಗಳಿಗೆ ಹಾಗೂ ಸಂಘ, ಸಂಸ್ಥೆಗಳಿಗೆ ಮಠವು ತುಂಬು ಹೃದಯದ ಕೃತಜ್ಞತೆ ಸಲ್ಲಿಸುತ್ತಿದೆ.



Managing Editor : Swami Muktidananda    Editor : Swami Jnanayogananda
Printed and Published by Swami Muktidananda, on behalf of Sri Ramakrishna Ashrama, Yadavagiri, Mysore and Printed at Mayur Graphics, No.C-12, Industrial Estate, Rajaji Nagar, Bangalore -560 010 and published at Sri Ramakrishna Ashrama, Yadavagiri, Mysore -570 020